ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ

ಚನ್ನರಾಯಪಟ್ಟಣ

**ಸಿ ಸಿ 1141/2015**

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ | ರಾಜೇಗೌಡ | ಚಾಸಾ-12 |
| ತಂದೆಯ ಹೆಸರು | ಃ | ನಿಂಗೇಗೌಡ | ಪ್ರಾಸಾ – 9 |
| ವಯಸ್ಸು | ಃ | 65 ವರ್ಷ | |
| ಉದ್ಯೋಗ | ಃ | ನಿವೃತ್ತ ಪಿ.ಎಸ್.ಐ. | ಪ್ರಮಾಣ ವಚನ ಬೋಧಿಸಲಾಯಿತು |
| ವಾಸ | ಃ | ಚನ್ನರಾಯಪಟ್ಟಣ | ದಿನಾಂಕಃ **06-04-2021** |

---

**ಮುಖ್ಯ ವಿಚಾರಣೆ ಃ- ಮಾನ್ಯ ಸರ್ಕಾರಿ ಅಭಿಯೋಜಕರವರಿಂದ**

ನಾನು ದಿಃ 01-12-2010 ರಿಂದ ದಿಃ 31-12-2015 ರವರಿಗೆ ಚನ್ನರಾಯಪಟ್ಟಣ ನಗರ ಪೊಲೀಸ್ ಠಾಣೆಯಲ್ಲಿ ಎ.ಎಸ್.ಐ., ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 4-4-2014 ರಂದು ಮದ್ಯಾಹ್ನ 1 ಗಂಟೆ ಸಮಯದಲ್ಲಿ ನಾನು ಠಾಣಾ ಪ್ರಭಾರದಲ್ಲಿದ್ದಾಗ ಚಾಸಾ-1 ಠಾಣೆಗೆ ಬಂದು ನೀಡಿದ ಲಿಖಿತ ದೂರನ್ನು ಪಡೆದು ಕ್ರ ನಂ.128/2014 ರಲ್ಲಿ ಪ್ರಕರಣ ದಾಖಲಿಸಿ, ಪ್ರ ವ ವರದಿಯನ್ನು ಮೇಲಾಧಿಕಾರಿಗಳಿಗೆ ಮತ್ತು ಘನ ನ್ಯಾಯಾಲಯಕ್ಕೆ ಪ್ರ ವ ವರದಿಯನ್ನು ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿ ದೂರನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ಪ್ರ ವ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-5 ಎಂದು, ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು.

ನಂತರ ಚಾಸಾ-1 ರವರು ಠಾಣೆಯ ಉತ್ತರಭಾಗದ ಹೊರ ಆವರಣದಲ್ಲಿ ತಂದು ನಿಲ್ಲಿಸಿದ್ದ ಕೆಎ-13-ಎ-8927 ರ ಕೆ ಎಸ್ ಆರ್ ಟಿ ಸಿ ಬಸ್ ನ್ನು ಪಂಚರಾದ ಚಾಸಾ-1 ಮತ್ತು ಆನಂದ್ ರವರ ಸಮಕ್ಷಮ ಮದ್ಯಾಹ್ನ 12-45 ರಿಂದ 2-25 ಗಂಟೆಯವರೆಗೆ ಮಹಜರ್ ಕ್ರಮ ಜರುಗಿಸಿ ಅಮಾನತ್ ಪಡಿಸಿಕೊಂಡಿರುತ್ತೇನೆ . ಸಾಕ್ಷಿಯು ಸದರಿ ಮಹಜರ್ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-3 ಎಂದು ಗುರುತಿಸಿದ್ದು ಸಾಕ್ಷಿ ಸಹಿಯನ್ನು ನಿಪಿ-3 ಎ ಎಂದು ಗುರುತಿಸಲಾಯಿತು . ನಂತರ

ಅಮಾನತ್ ಪಡಿಸಿಕೊಂಡ ವಾಹನವನ್ನು ಮಾಲುಪಟ್ಟಿಗೆ ಅಳವಡಿಸಿಕೊಂಡಿರುತ್ತೇನೆ .

ಅದೇ ದಿನ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ನಿಪಿ-2 ರಂತೆ ಚಾಸಾ-6 ಮತ್ತು 7 ರವರ ಸಮಕ್ಷಮ ಬೆಳಗ್ಗೆ ಸುಮಾರು 3 ರಿಂದ 3-45 ರವರೆಗೆ ಮಹಜರ್ ಕ್ರಮ ವನ್ನು ಜರುಗಿಸಿರುತ್ತೇನೆ . ಕೃತ್ಯಕ್ಕೆ ಬಳಸಲಾದ ಕಲ್ಲನ್ನು ಅಮಾನತ್ ಪಡಿಸಿಕೊಂಡಿರುತ್ತೇನೆ ಸದರಿ ಕಲ್ಲನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಎಂಓ-1 ನ್ನು ನೋಡಿ ಗುರುತಿಸುತ್ತಾರೆ .ಚಾಸಾ-2 ರವರ ಹೇಳಿಕೆ ಪಡೆದುಕೊಂಡಿರುತ್ತೇನೆ . ನಂತರ ಕಲ್ಲನ್ನು ಮಾಲುಪಟ್ಟಿಗೆ ಅಳವಡಿಸಿಕೊಂಡಿರುತ್ತೇನೆ . ನಂತರ ಸದರಿ ಬಸ್ಸನ್ನು ನ್ಯಾಯಾಲಯದ ಆದೇಶದ ಮೇರೆಗೆ ಮುಚ್ಚಳಿಕೆ ಪಡೆದು ಚಾಸಾ-1 ರವರ ವಶಕ್ಕೆ ನೀಡಿರುತ್ತೇನೆ . ನಂತರ ಚಾಸಾ-1 ಮತ್ತು 2 ರವರ ಕರ್ತವ್ಯ ದೃಢೀಕರಣ ಪತ್ರವನ್ನು ಪಡೆದುಕೊಂಡಿರುತ್ತೇನೆ . ಸಾಕ್ಷಿಯು ಕರ್ತವ್ಯ ದೃಢೀಕರಣ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-6 ಎಂದು ಗುರುತಿಸಲಾಯಿತು . ಸಾಕ್ಷಿಯು ಕೃತ್ಯಕ್ಕೆ ಒಳಗಾಗಿದ್ದ ಬಸ್ಸು ಹಾಗೂ ಕಾರಿನ ನಾಲ್ಕು ಫೋಟೋವನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-7 ರಿಂದ 10 ಎಂದು ಗುರುತಿಸಲಾಯಿತು . ಸಾಕ್ಷಿಯು ಮಚ್ಚಳಿಕೆ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ11 ಎಂದು ಸಾಕ್ಷಿ ಸಹಿಯನ್ನು ನಿಪಿ-11 ಎ ಎಂದು ಗುರುತಿಸಲಾಯಿತು .

<u>ಪಾಟೀ ಸವಾಲುಃ -</u> ಶ್ರೀ ಆರೋಪಿ ಪರ ಶ್ರೀ ಸಿ ಎನ್ ಎನ್ ., ವಕೀಲರಿಂದ

ಚಾಸಾ-1 ರವರ ದೂರು ನೀಡಿದಾಗ ಸರಿಯಾಗಿ ಪರಿಶೀಲನೆಮಾಡದೇ ಸುಳ್ಳು ಪ್ರಕರಣ ದಾಖಲುಮಾಡಿದ್ದೇನೆಂದರೆ ಸರಿಯಲ್ಲ. ನಾನು ಸ್ಥಳದಲ್ಲಿ ಮತ್ತು ಸಾಕ್ಷಿದಾರರ ಸಮಕ್ಷಮ ಯಾವುದೇ ಮಹಜರ್ ನ್ನು ಬರೆಯದೇ ಠಾಣೆಯಲ್ಲಿ ಸೃಷ್ಟಿಮಾಡಿಕೊಂಡಿದ್ದೇನೆಂದರೆ ಸರಿಯಲ್ಲ. ನಾನು ಸ್ಥಳಕ್ಕೆ ಹೋಗಿ ಮಹಜರ್ ಮಾಡಿಲ್ಲ , ಸಾಕ್ಷಿದಾರರ ಹೇಳಿಕೆ ಪಡೆದಿಲ್ಲ , ಯಾವುದೇ ವಾಹನಗಳನ್ನು ಅಮಾನತ್ ಪಡಿಸಿಕೊಂಡಿಲ್ಲ, ಹಾಗೂ ಯಾವುದೇ ಕಲ್ಲನ್ನು ಅಮಾನತ್ ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರಿಗೆ ಸಹಾಯಮಾಡುವ ಸಲುವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ-</u>

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸ.ಇ.ಎ.ಒ.,

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಚನ್ನರಾಯಪಟ್ಟಣ